FRP dues: Notices to 15 Maha sugar factories

NANDA KASABE
Pune, May 12

THE MAHARASHTRA SUGAR Commissionerate has issued notices to 15 sugar factories in the state for their failure to pay fair and remunerative price (FRP) payments due to farmers, senior officials of the Commissionerate revealed. The FRP arrears as on date are to the tune of ₹780 crore.

According to the Sugarcane Control Act, factories must make full payment to the farmers within 14 days of taking the crop for crushing. But these factories made payments of less than 60% of the total dues. Around 144 factories participated in crushing 545.83 lakh tonne this season. According to the data released by the Commissionerate, the total FRP of ₹12,785.75 crore is to be paid by factories to cane farmers as on April 30. Of the total dues, factories have paid ₹12,036.62 crore — amounting to 94% of the total dues. Around 86 factories have made 100% cane payments to farmers and 58 factories owe FRP dues. Of these, 29 factories have made FRP payments ranging between 80% and 99.99%, 14 factories have made payments between 60% and 79.99%, and 15 factories have made less than 60% FRP payments to the farmers.

The notices have been issued by the regional joint directors of the respective areas where the sugar factories are located in the state, officials said.

According to the officials, due to the lockdown across the country, no action was initiated by the Commisisonerate till date for the recovery of FRP dues.

Since sugar commissioner Saurabh Rao has been given the additional charge of Coronavirus Control, the directives have been issued by the regional joint directors (RJDs).

Sugar recoveries were hit this season due to the extended monsoons in parts of Maharashtra and drought in other parts of the state. The sugar season this year was short due to a low cane availability. In Maharashtra, sugar production till April 30, 2020, was 60.67 lakh tonne, compared to 107.15 lakh tonne produced last year in the same period, almost 46.5 lakh tonne less than last year.

Around 144 factories participated in crushing 545.83 lakh tonne this season. Last season, some 195 factories had crushed 949.9 lakh tonne of cane and Revenue Recovery Code (RRC) notices were issued to 54 factories.

Govt sets up separate panel under Apeda to boost rice exports

FE BUREAU
New Delhi, May 12

THE CENTRE HAS set up a separate panel under agri-export promotion body Apeda to boost

ದಿನ ದರ್ಶಿಕೆ

ಬುಧವಾರ 13.05.2020

ಸಂವತ್ಸರ : ಶಾರ್ವರಿ
ಆಯನ : ಉತ್ತರಾಯಣ
ಋತು : ವಸಂತ
ಮಾಸ : ವೈಶಾಖ
ಮಾಸ ನಿಯಾಮಕ: ಕಮಲಾಲಯಾಮಧುಸೂದನ
ಪಕ್ಷ : ಕೃಷ್ಣ
ತಿಥಿ : ಷಷ್ಠೀ
ನಕ್ಷತ್ರ: ಉತ್ತರಾಷಾಢಾ
ಯೋಗ : ಶುಕ್ಲ
ಕರಣ : ವಣಿಕ್
ಸೂರ್ಯೋದಯ : 05.57
ಸೂರ್ಯಾಸ್ತ : 06.50
ರಾಹು ಕಾಲ : ಮ.12.00 ರಿಂದ 1.30 ರವರೆಗೆ
ಮಾಹಿತಿ: ಪ್ರಸಾದ ಆಚಾರ್ಯ

ಗುಜರಾತಿ ತಬ್ಲಿಘ್‌ರಿಂದ ನಂಜು | ಧರ್ಮ ಸಭೆಯಿಂದ ಬಂತು ಧರ್ಮ ಸಂಕಟ | ಮತ್ತೆ 15 ಮಂದಿಗೆ ಸೋಂಕು

ಡಿಸಿಎಂ ಕಾರಜೋಳ ಕ್ಷೇತ್ರದಲ್ಲಿ ಕರೋನಾ ಖಾರ

ರಾಘವೇಂದ್ರ ಕಲಾದಗಿ ಬಾಗಲಕೋಟೆ

ಡಿಸಿಎಂ ಗೋವಿಂದ ಕಾರಜೋಳರ ತವರು ಕ್ಷೇತ್ರ ಮುಧೋಳದಲ್ಲಿ ಕರೋನಾ ವೈರಸ್ ರುದ್ರನರ್ತನ ನಡೆಸಿದೆ. ದೆಹಲಿಯ ನಿಜಾಮುದ್ದೀನ್ ತಬ್ಲಿಘ್‌ಗಳ ನಂಜು ಮಾಸುವ ಮುನ್ನವೇ ಗುಜರಾತಿ ತಬ್ಲಿಘ್‌ಗಳ ನಂಜಿನಿಂದ ಮತ್ತಷ್ಟು ತಲ್ಲಣ ಆವರಿಸಿದೆ.

ಒಂದೇ (ಮಂಗಳವಾರ) ದಿನ 14 ಸೋಂಕಿತರು ಕಾಣಿಸಿಕೊಂಡು ಒಟ್ಟು 24 ಜನರನ್ನು ಹೊಂದಿದ್ದ ಮುಧೋಳ ಪಟ್ಟಣವು ಈಗ ಭಾರಿ ಆತಂಕದ ಮಡುವಿನಲ್ಲಿ ಕಾಲ ಕಳೆಯುತ್ತಿದೆ. ಜಿಲ್ಲೆಯು 68 ಸೋಂಕಿತರ ಗುಂಪಿನಿಂದ ಹೊರಬರಲು ತೀವ್ರ ಸೆಣಸಾಟ ನಡೆಸಿದೆ.

ಕಳೆದ ಮಾರ್ಚ್‌ನಲ್ಲಿ ಮುಧೋಳ 17 ಜನ, ಬನಹಟ್ಟಿಯ ಒಬ್ಬ ವ್ಯಕ್ತಿಯು ಸೇರಿ ಖಾಸಗಿ ವಾಹನದಲ್ಲಿ ಗುಜರಾತಿನ ಅಹಮದಾಬಾದ್ ಧಾರ್ಮಿಕ ಸಭೆಗೆ ತೆರಳಿದ್ದರು. ಅದರಲ್ಲಿ ಒಬ್ಬನಿಗೆ ಕರೋನಾ ಸೋಂಕು ದೃಢವಾಗಿತ್ತು ಎನ್ನಲಾಗಿದೆ. ಗುಜರಾತಿನ ಅಹಮದಾಬಾದ್ ನಗರದ ಎಎಂಸಿ ಕೇಂದ್ರದಲ್ಲಿ 29 ಜನರನ್ನು ಕ್ವಾರಂಟೈನ್ ಮಾಡ ಲಾಗಿತ್ತು.

ಜಿಲ್ಲಾಡಳಿತದ ಅನುಮತಿ ಪಡೆದಿದ್ದರು: ಲಾಕಡೌನ್ ಸಡಿಲಿಕೆ ಬಳಿಕ ಮೇ.4ರಂದು ಜಿಲ್ಲಾಡಳಿತ ಅನುಮತಿ ನೀಡಿದ ಬಳಿಕ ಜಿಲ್ಲೆಯತ್ತ ಪ್ರಯಾಣ ಬೆಳೆಸಿದ್ದರು. ಮೇ 6 ರಂದು ಬೆಳಗಾವಿ ಜಿಲ್ಲೆ ನಿಪ್ಪಾಣಿ ಚೆಕ್ ಪೋಸ್ಟ್‌ನಲ್ಲಿ ಇವರನ್ನು ತಡೆಹಿಡಿದು ಬಳಿಕ ಬಾಗಲಕೋಟೆ ಜಿಲ್ಲಾಡಳಿತ ಅನುಮತಿ ನಂತರ ಈಚೆ ಕಳುಹಿಸಲಾಗಿತ್ತು. ಮುಧೋಳದ 17, ಬನಹಟ್ಟಿಯ 12 ಜನರಿಗೆ ಕ್ವಾರಂಟೈನ್ ಪರೀಕ್ಷೆಯಲ್ಲಿ ಒಂದೇ ದಿನದಲ್ಲಿ 14 ಮಂದಿಗೆ ಸೋಂಕು ದೃಢಪಟ್ಟಿತ್ತು. ಒಂದೇ ಬಸ್‌ನಲ್ಲಿ ಪ್ರಯಾಣ ಬೆಳೆಸಿದ್ದ ತಬ್ಲಿಘ್‌ಗಳಲ್ಲಿ ಈಗ ಆತಂಕ ಹೆಚ್ಚಾಗಿದೆ.

ತಬ್ಲಿಘ್‌ಗಳಾದ ಪಿ. 870, 871, 872, 873, 874, 875, 876, 893, 894, 895, 896, 897, 898 ವ್ಯಕ್ತಿಗಳಿಗೆ ಸೋಂಕು ಕಂಡಿದೆ. ಇನ್ನೂ ಕೆಮ್ಮು ನೆಗಡಿ ಎಂದು ಆಸ್ಪತ್ರೆ ಸೇರಿದ್ದ ಪಿ.865 ಬಾದಾಮಿಯ ವೃದ್ಧನಿಗೆ ಸೋಂಕು ಕಾಣಿಸಿದೆ.

ಧರ್ಮ ಸಭೆ ತಂದ ಧರ್ಮ ಸಂಕಟ: ಕಳೆದ ಏಪ್ರಿಲ್‌ನಲ್ಲಿ ದೆಹಲಿ ನಿಜಾಮುದ್ದೀನ್ ಹಾಗೂ ಮೇ ತಿಂಗಳಲ್ಲಿ ಗುಜರಾತಿನ ಅಹದಬಾದ್ ಧರ್ಮ ಸಭೆಗಳು ಬಾಗಲಕೋಟೆ ಜಿಲ್ಲೆಯನ್ನು ಧರ್ಮ ಸಂಕಟಕ್ಕೆ ತಳ್ಳಿವೆ. ಮುಧೋಳ, ಜಮಖಂಡಿ ತಾಲೂಕುಗಳಲ್ಲಿ ತಬ್ಲಿಘ್‌ಗಳಿಂದ ವೈರಸ್ ತಾಂಡವಾಡುತ್ತಿದ್ದು ಜಿಲ್ಲಾದ್ಯಂತ ಭಾರಿ ಸಂಚಲನದ ಭೀತಿ ಆವರಿಸಿದೆ. ವಿವಿಧ ರಾಜ್ಯಗಳಿಂದ ಆಗಮಿಸುವ ವ್ಯಕ್ತಿಗಳಿಂದ ಜಿಲ್ಲಾಡಳಿತಕ್ಕೆ ದೊಡ್ಡ ತಲೆನೋವಾಗಿ ಕಾಡುತ್ತಿದೆ. ಕೆಲವರು ಅನ್ಯ ಮಾರ್ಗ ಬಳಸಿ ಯಾವುದೇ ಪರೀಕ್ಷೆಗೆ ಮಾಡಿಸದೆ ಸರಕಾರದ ಕಣ್ಣು ತಪ್ಪಿಸಿ ಗಡಿ ದಾಟಿ ತವರು ಸೇರುತ್ತಿರುವುದು ಅಪಾಯದ ಮುನ್ಸೂಚನೆಯಾಗಿದೆ.

ಇತ್ತ ಕಾಟ, ಅತ್ತ ಗುಣಮುಖ: ಕಲಬುರಗಿ ಸೋಂಕಿನ ನಂಟಿನಿಂದ ಕ್ರಮೇಣ ಗುಣಮುಖ ವಾಗುವ ಸಂತಸದ ಮಧ್ಯೆ ಗರ್ಭಿಣಿ ಹಾಗೂ ತಬ್ಲಿಘ್‌ಗಳ ಸೋಂಕಿನ ಪ್ರಮಾಣ ದಿನದಿಂದ ದಿನಕ್ಕೆ ಜಿಲ್ಲೆಗೆ ಹೆಮ್ಮಾರಿಯಂತೆ ಕಾಡುತ್ತಿದೆ. ಮೆಲ್ಲನೆ ಕರೋನಾ ವೈರಸ್ ವ್ಯಾಪ್ತಿ ವಿಸ್ತರಣೆಯು ಕಂಗೆಡಿಸಿದೆ. ಕಾಟನ್ ಸೀರೆ ಖ್ಯಾತಿಯ ಬನಹಟ್ಟಿ, ಪ್ರವಾಸಿ ತಾಣ ಬಾದಾಮಿ, ಘಟವರ್ಧನ ನಗರಿ ಜಮಖಂಡಿ, ರನ್ನ ನಾಡು ಮುಧೋಳ ಪಟ್ಟಣಗಳಿಗೆ ಬೆಂಬಿಡದೆ ವೈರಸ್ ಕಾಡುತ್ತಿದೆ.

ಜಮಖಂಡಿಯ 6 ಜನ ಗುಣಮುಖ

ಜಿಲ್ಲೆಯ ಜಮಖಂಡಿಯ 6 ಜನ ಕೋವಿಡ್ ಸೋಂಕಿನಿಂದ ಗುಣಮುಖರಾಗಿದ್ದು, ಮಂಗಳವಾರ ಜಿಲ್ಲಾ ಕೋವಿಡ್ ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾರೆ. ಜಮಖಂಡಿಯ 46 ವರ್ಷದ ಪುರುಷ ಪಿ-456, 32 ವರ್ಷದ ಮಹಿಳೆ ಪಿ-508, 21 ವರ್ಷದ ಮಹಿಳೆ ಪಿ-509, 22 ವರ್ಷದ ಪುರುಷ ಪಿ-523, 11 ವರ್ಷದ ಬಾಲಕ ಪಿ-522 ಹಾಗೂ 20 ವರ್ಷದ ಮಹಿಳೆ ಪಿ-521 ಕೋವಿಡ್‌ನಿಂದ ಗುಣಮುಖರಾದವರು. ಇವರಿಗೆ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಗುಣಮುಖರಾದ ನಂತರ ಮತ್ತೆ ಸ್ಯಾಂಪಲ್ ಕಳುಹಿಸಲಾಗಿ ವರದಿಯಲ್ಲಿ ನೆಗಟಿವ್ ಬಂದ ನಂತರವೇ ಅವರನ್ನು ಜಿಲ್ಲಾ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ ತಿಳಿಸಿದರು.

ಸಾಲಕ್ಕೆ ಹೆದರಿ ರೈತ ಆತ್ಮಹತ್ಯೆ

ಬೆಳಗಾವಿ: ಸಾಲಕ್ಕೆ ಹೆದರಿ ರೈತ ನೇಣಿಗೆ ಶರಣಾದ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ನಂದೇಶ್ವರ ಗ್ರಾಮದಲ್ಲಿ ನಡೆದಿದೆ. ರೈತ ಸಂಗಪ್ಪ ಬಸಪ್ಪ ಯಲ್ಲಟ್ಟಿ(50) ಮೃತ ದುರ್ದೈವಿ. ಈ ಹಿಂದೆ ಆಗಸ್ಟ್‌ನಲ್ಲಿ ಕೃಷ್ಣಾ ನದಿ ಪ್ರವಾಹ ಬಂದಾಗ 6 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬು, ಮನೆ ಪ್ರವಾಹದಲ್ಲಿ ಮುಳುಗಿ ಸಂಪೂರ್ಣ ನಾಶವಾಗಿ ಅಪಾರ ಹಾನಿಯಾಗಿತ್ತು. ಅಲ್ಲದೇ ರೈತ ಸಿಂಡಿಕೇಟ್ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಸ್ಥಳೀಯ ಸಹಕಾರಿ ಸಂಘದಲ್ಲಿ ಸಾಲ ಹಾಗೂ ಕೈಗಡ ಸೇರಿ 5 ಲಕ್ಷಕ್ಕೂ ಅಧಿಕ ಸಾಲ ಮಾಡಿದ್ದಾರೆ. ತಾವು ಮಾಡಿರುವ ಸಾಲ ತೀರಿಸುವುದು ಹೇಗೆಂದು ಮನನೊಂದು ಸಂಗಪ್ಪ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ರೈತನಿಗೆ ಇಬ್ಬರು ಗಂಡುಮಕ್ಕಳು ಹಾಗೂ ಪತ್ನಿ ಇದ್ದಾರೆ. ಈ ಸಂಬಂಧ ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಂಬೈನಿಂದ ಬಂದ ಐವರಿಗೆ ಸೋಂಕು

ಹಾಸನ: ಮಹಾರಾಷ್ಟ್ರದ ಮುಂಬೈನಿಂದ ಜಿಲ್ಲೆಗೆ ಬಂದಿದ್ದ ಐವರಿಗೆ ಕೋವಿಡ್-19 ಸೋಂಕು ದೃಢಪಟ್ಟಿದೆ. ಮುಂಬೈನಿಂದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿಗೆ ಇವರು ಬಂದಿದ್ದರು ಎನ್ನಲಾಗಿದೆ. 4 ವರ್ಷ ಮತ್ತು 7 ವರ್ಷದ ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಐವರಿಗೆ ಸೋಂಕು ತಗಿಲಿದೆ. ಮುಂಬೈನಿಂದ ಬಂದ ಇವರು ನೇರವಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರು ಯಾರ ಸಂಪರ್ಕದಲ್ಲಿ ಇರಲಿಲ್ಲ, ಜನತೆಗೆ ಆತಂಕ ಬೇಡ ಎಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. 14 ದಿನ ನಂತರ ಗಂಟಲು ಪರೀಕ್ಷೆ ಮಾಡಬೇಕಿತ್ತು ಆದರೆ ಮಹಾರಾಷ್ಟ್ರದಿಂದ ಬಂದ ತಕ್ಷಣ ಮುನ್ನೆಚ್ಚರಿಕಾ ಕ್ರಮವಾಗಿ ಪರೀಕ್ಷೆ ಮಾಡಿದ ಹಿನ್ನಲೆ ಜಿಲ್ಲೆಯಲ್ಲಿ ಪಾಸಿಟಿವ್ ಪತ್ತೆಯಾಗಿದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಮಹಾರಾಷ್ಟ್ರ ಮೂಲದಿಂದ ಸುಮಾರು 200 ಮಂದಿ ಬಂದಿದ್ದಾರೆ ಎಲ್ಲರನ್ನು ಪರೀಕ್ಷೆ ಮಾಡಲಾಗುತ್ತಿದೆ ಎಂದರು.

ಅನುಮಾನಾಸ್ಪದ ರೀತಿಯಲ್ಲಿ ಕಾಫಿ ಉದ್ಯಮಿಯ ಕೊಲೆ

ಮಡಿಕೇರಿ: ಕಾಫಿ ಉದ್ಯಮಿ ಅನುಮಾನಾಸ್ಪದ ರೀತಿಯಲ್ಲಿ ಕೊಲೆಯಾಗಿರು ಘಟನೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಕುಶಾಲನಗರ ಪಟ್ಟಣದ ಕುವೆಂಪು ಬಡಾವಣೆಯಲ್ಲಿ ನಡೆದಿದೆ. ಉದ್ಯಮಿ ಪ್ರವೀಣ್ ಪೂವಪ್ಪ (42) ರಕ್ತದ ಮಡುವಿನಲ್ಲಿ ಬಿದ್ದು ಕೊಲೆಯಾಗಿರುವ ವ್ಯಕ್ತಿ. ಕುವೆಂಪು ಬಡಾವಣೆಯ ಕೆ.ಪಿ.ಸುಗುಣಾ ಎಂಬುವರ ಬಾಡಿಗೆ ಮನೆಯಲ್ಲಿ ಘಟನೆ ನಡೆದಿದ್ದು, ವಿವಾಹಿತ ಪ್ರವೀಣ್ ಜತೆಯಲ್ಲಿ ಪತ್ನಿ ವಾಸ ಇರಲಿಲ್ಲ ಎಂಬ ಮಾಹಿತಿ ಲಭಿಸಿದೆ. ಕಳೆದ ರಾತ್ರಿ ಕಾರಿನಲ್ಲಿ ಅಪರಿಚಿತರು ಮನೆಗೆ ಬಂದು ಹೋಗಿದ್ದರು ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ.ಪನ್ನೇಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶ್ವಾನದಳ ಬೆರಳಚ್ಚು ತಜ್ಞರಿಂದ ಪರಿಶೀಲನೆ ನಡೆಸಲಾಗಿದೆ. ಘಟನೆ ಸಂಬಂಧ ಕುಶಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಣಿವಣ್ಣನ್ ವರ್ಗಾವಣೆಗೆ ನೆಟ್ಟಿಗರೇ ಕಾರಣ

ಕಾರವಾರ: ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆ ನಮ್ಮ ವಿವೇಚನೆಗೆ, ಅಧಿಕಾರಕ್ಕೂ ಮೀರಿದಾಗ ಅಪಾಯ ತರುತ್ತದೆ. ತಂತ್ರಜ್ಞಾನ ಬಳಸುವವರು ತಮ್ಮ ಮಿತಿಯನ್ನು ಅರಿತು ಬಳಸಬೇಕು ಎಂದು ವಾರ್ತಾ ಹಾಗೂ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಪಿ. ಮಣಿವಣ್ಣನ್ ವರ್ಗಾವಣೆ ಕುರಿತು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿಗಳು ಯಾವ ಕಾರಣಕ್ಕೆ ವರ್ಗಾವಣೆ ಮಾಡಿದ್ದಾರೆ ಎನ್ನುವುದು ತಿಳಿದಿಲ್ಲ, ಅವರು ಕಾರ್ಮಿಕರ ಪರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಬರೆದುಕೊಂಡಿದ್ದು ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಕಾರ್ಮಿಕ ಇಲಾಖೆ ಕಾರ್ಮಿಕರು ಹಾಗೂ ಮಾಲೀಕರ ನಡುವಿನ ಸೇತುವೆಯಂತೆ ಕೆಲಸ ಮಾಡಬೇಕಾಗಿದೆ. ಕಾರ್ಮಿಕರ ಪರವಾಗಿ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಇಲಾಖೆಗೆ ಸಾಕಷ್ಟು ಅವಕಾಶ ಇದೆ. ಆದರೆ ಭವಿಷ್ಯದಲ್ಲಿ ಕಾರ್ಮಿಕರ ಸ್ಥಿತಿ ಏನು ಎನ್ನುವುದನ್ನೂ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೊರರಾಜ್ಯದಿಂದ ರಾಜ್ಯಕ್ಕೆ ಬರುತ್ತಿರುವ ಲಕ್ಷಕ್ಕೂ ಹೆಚ್ಚು ಜನರನ್ನು ಕಡ್ಡಾಯವಾಗಿ ಸರಕಾರಿ ಕ್ವಾರಂಟೈನ್ ಮಾಡಲಾಗುತ್ತದೆ. ಹಂತ ಹಂತವಾಗಿ ಅವರನ್ನು ರಾಜ್ಯಕ್ಕೆ ಕರೆಸಿಕೊಳ್ಳಲಾಗುತ್ತದೆ. ಯಾರನ್ನೂ ಹೋಮ್ ಕ್ವಾರಂಟೈನ್ ಮಾಡುವುದಿಲ್ಲ. ಆದರೆ ಬಂದವರನ್ನೆಲ್ಲಾ ಕ್ವಾರಂಟೈನ್ ಮಾಡಲಾಗುತ್ತದೆ ಎಂದರು.

ಪ್ರಯೋಗಾಲಯ ಉದ್ಘಾಟನೆ: ಕಾರವಾರದ ವೈದ್ಯಕೀಯ ಕಾಲೇಜಿನಲ್ಲಿ ಕರಾವಳಿ ಭಾಗದ ಮೊದಲ ಕೋವಿಡ್-19 ಪ್ರಯೋಗಾಲಯವನ್ನು ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ್ ಹೆಬ್ಬಾರ್ ಉದ್ಘಾಟಿಸಿದರು. ಇಷ್ಟು ದಿನ ಉತ್ತರ ಕನ್ನಡ ಜಿಲ್ಲೆಯಲ್ಲಿನ ಸೋಂಕಿತರ ಪರೀಕ್ಷೆಯನ್ನು ಶಿವಮೊಗ್ಗ ಅಥವಾ ಬೆಂಗಳೂರಿಗೆ ಕಳುಹಿಸಿ ವರದಿ ತರಿಸಬೇಕಿತ್ತು. ಇದರಿಂದ ಸಾಕಷ್ಟು ಸಮಯ ತಗುಲುತ್ತಿತ್ತು. ಇದೀಗ ಕಾರವಾರದ ವೈದ್ಯಕೀಯ ಕಾಲೇಜಿನಲ್ಲಿಯೇ ಮಾಡಲು ಸುಸಜ್ಜಿತ ಪ್ರಯೋಗಾಲಯ ನಿರ್ಮಾಣವಾಗಿದ್ದು, ಇಂದಿನಿಂದ ಕಾರ್ಯ ನಿರ್ವಹಿಸಲಿದೆ.

ಕಾರವಾರದ ವೈದ್ಯಕೀಯ ಕಾಲೇಜಿನಲ್ಲಿ ಕರಾವಳಿ ಭಾಗದ ಮೊದಲ ಕೋವಿಡ್-19 ಪ್ರಯೋಗಾಲಯವನ್ನು ಸಚಿವ ಶಿವರಾಮ್ ಹೆಬ್ಬಾರ್ ಉದ್ಘಾಟಿಸಿದರು.

ವಿದ್ಯುತ್ ಬಿಲ್ ಪಾವತಿಸುವಂತೆ ಒತ್ತಡ ಹೇರುವಂತಿಲ್ಲ

ಮಂಗಳೂರು: ವಿದ್ಯುತ್ ಬಿಲ್‌ಗಳ ಬಗ್ಗೆ ಜನರು ಹಲವು ದೂರುಗಳನ್ನು ನೀಡಿರುವುದು ಸರಕಾರದ ಗಮನಕ್ಕೆ ಬಂದಿದೆ. ಮನೆ ಮತ್ತು ಸಣ್ಣ ಉದ್ಯಮಕ್ಕೆ ಕಡಿಮೆ ಸರಾಸರಿ ಇರುವ ತಿಂಗಳ ಬಿಲ್ ಆಧಾರದಲ್ಲಿ ಬಿಲ್ ನೀಡಬೇಕು. ಜೂನ್ ತಿಂಗಳಿನವರೆಗೂ ಕಡ್ಡಾಯವಾಗಿ ಬಿಲ್ ಪಾವತಿಸುವಂತೆ ಒತ್ತಡ ಹೇರುವಂತಿಲ್ಲ ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತಿಲ್ಲ ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಸೂಚಿಸಿದ್ದಾರೆ. ಸಭೆಯಲ್ಲಿ ಮಾತನಾಡಿ, ಲಾಕ್‌ಡೌನ್ ಹಿನ್ನೆಲೆಯಲ್ಲಿ ವಿದೇಶ ಮತ್ತು ರಾಜ್ಯದಲ್ಲಿ ಬಾಕಿ ಉಳಿದಿರುವ ದ.ಕ. ಜಿಲ್ಲೆಯ ಪ್ರಯಾಣಿಕರು ಸೇವಾ ಸಿಂಧೂ ಆಪ್ ಮೂಲಕ ನೋಂದಾವಣೆ ಮಾಡಿಕೊಂಡು ಜಿಲ್ಲೆಗೆ ಬರುವುದಕ್ಕೆ ದ.ಕ ಜಿಲ್ಲಾಡಳಿತ ಅನುಮತಿಯನ್ನು ನೀಡಿದೆ. ಜಿಲ್ಲೆಗೆ ಬಂದವರಿಗೆ ಕಡ್ಡಾಯವಾಗಿ 14 ದಿನಗಳ ಕಾಲ ಕ್ವಾರಂಟೈನ್‌ನಲ್ಲಿ ಇರಿಸಲಾಗುತ್ತದೆ ಈಗಾಗಲೇ ಸೇವಾ ಸಿಂಧೂ ಮೂಲಕ 6,092 ಅರ್ಜಿಗಳು ಸ್ವೀಕೃತವಾಗಿದ್ದು, ಸಲ್ಲಿಸಿರುವ ಅರ್ಜಿಯಲ್ಲಿ ಕುಟುಂಬ ಸದಸ್ಯರು ಸೇರಿ ಸಮಾರು 24 ಸಾವಿರದಿಂದ 25 ಸಾವಿರದಷ್ಟು ಜನರು ಜಿಲ್ಲೆಗೆ ಆಗಮಿಸಬಹುದು ಎಂದು ಜಿಲ್ಲಾಡಳಿತದಿಂದ ಅಂದಾಜಿಸಲಾಗಿದೆ ಎಂದರು.

ಮೈಮುಲ್ ಹುದ್ದೆಗಳ ನೇಮಕದಲ್ಲಿ ಅಕ್ರಮ

ಮೈಸೂರು: ಮೈಸೂರು ಜಿಲ್ಲಾ ಸಹಕಾರ ಹಾಲು ಒಕ್ಕೂಟದಲ್ಲಿ ಖಾಲಿ ಇರುವ ಹುದ್ದೆಗಳ ನೇಮಕದಲ್ಲಿ ಅಕ್ರಮ ಮ್ಯಾಚ್ ಫಿಕ್ಸಿಂಗ್ ನಡೆಸಿ ಭಾರಿ ಅಕ್ರಮ, ಅವ್ಯವಹಾರ ನಡೆದಿದ್ದು ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೈಮುಲ್ ನೇಮಕಕ್ಕೆ ಸಂಬಂಧಿಸಿ ಹಲವು ಪತ್ರ ವ್ಯವಹಾರ ದಾಖಲೆ, ಸಹಕಾರ ಸಚಿವರಿಗೆ ಬರೆದಿರುವ ಪತ್ರ ಬಿಡುಗಡೆಗೊಳಿಸಿ ಮೈಮುಲ್‌ನಲ್ಲಿ ನಡೆದಿರುವ ಅಕ್ರಮದ ಬಗ್ಗೆ ಗಂಭೀರ ಆರೋಪ ಮಾಡಿದರು.

ಮೈಸೂರು ಹಾಲು ಒಕ್ಕೂಟದಲ್ಲಿ 168 ಹುದ್ದೆಗಳಿಗೆ ನೇಮಕ ಪ್ರಾರಂಭಗೊಂಡು ತದನಂತರ ಹೆಚ್ಚುವರಿಯಾಗಿ 25 ಹುದ್ದೆ ನೇಮಕ ಮಾಡಲು ಕೈಗೊಂಡಿರುವ ನಿರ್ಧಾರದ ಹಿಂದೆ ಅಕ್ರಮ ಅವ್ಯವಹಾರಗಳು ನಡೆದಿವೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಮುಖ್ಯಮಂತ್ರಿಗಳಿಗೆ ಪತ್ರದಲ್ಲಿ ಮನವಿ ಮಾಡಿದ್ದೇನೆ ಎಂದರು.

168 ಹುದ್ದೆಗಳ ನೇಮಕ ವೇಳೆ 'ಟ್ಯೂವರಿಯಾಗಿ 25 ಹುದ್ದೆಗಳನ್ನು ಸೃಷ್ಟಿಸಿರುವುದು ಸ್ಪಷ್ಟವಾಗಿ ನಿಯಮ ಉಲ್ಲಂಘನೆಯಾಗಿದೆ. ಈ ಬಗ್ಗೆ ಸಚಿವರ ಸ್ಪಷ್ಟನೆ ಪೂರಕವಾಗಿಲ್ಲ. ಇದೆಲ್ಲವೂ ಒಂದು ರೀತಿಯ ಮ್ಯಾಚ್ ಫಿಕ್ಸಿಂಗ್ ರೀತಿಯ ಅಕ್ರಮ ಮಾಡಲಾಗುತ್ತಿದೆ. ಅಧ್ಯಕ್ಷರು, ನಿರ್ದೇಶಕರ ನಡುವೆ ಮ್ಯಾಚ್ ಫಿಕ್ಸಿಂಗ್ ಆಗಿದ್ದು, ಅದರನ್ವಯ ಅಕ್ರಮ ನೇಮಕ ಮಾಡಲಾಗಿದೆ ಎಂದು ಆರೋಪಿಸಿದರು.

ನನ್ನ ಕ್ಷೇತ್ರದ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ನೀಡಿದ ಸುಳಿವಿನ ಮೇರೆಗೆ ಈ ವಿಷಯ ಗೊತ್ತಾಗಿದೆ. ಅಕ್ರಮ ನೇಮಕಕ್ಕೆ ಅಂದಾಜು 35 ರಿಂದ 40 ಕೋಟಿ ನೇಮಕಕ್ಕೆ ಹಣ ವಸೂಲಿ ಮಾಡಲಾಗಿದ್ದು, ಅರ್ಜಿ ಹಾಕಿದ ವಿದ್ಯಾರ್ಥಿಗಳೊಂದಿಗೆ ಮಾತನಾಡಿರುವ ಆಡಿಯೋ ದಾಖಲೆಯೂ ತಮ್ಮ ಬಳಿ ಇರುವುದಾಗಿ ಹೇಳಿದರು.

ಏನು ಆಡಿಯೋದಲ್ಲಿರುವುದು?: ಕೆಲಸಕ್ಕೆ ಅರ್ಜಿ ಹಾಕಿರುವ ಇಬ್ಬರು ಮಹಿಳೆಯರೊಂದಿಗೆ ಮಾತನಾಡಿ 'ಇಂತಿಷ್ಟು ಹಣವನ್ನು ಕೊಟ್ಟರೆ ನೇಮಕ ಮಾಡುವುದಾಗಿ' ಹೇಳಿದ್ದು, ಇದಕ್ಕೆ ಪ್ರತಿಭಾವಂತೆಯರು ಬಾಣಂತಿಯೊಬ್ಬಳು ತನ್ನ ಬಳಿ ಅಷ್ಟು ಹಣ ಇಲ್ಲದಿರುವುದಾಗಿ ಹೇಳಿಕೊಂಡಿದ್ದಾಳೆ. ಕೊನೆಗೆ ಆಕೆಗೆ ನೌಕರಿ ಸಿಕ್ಕಿಲ್ಲ. ಇದರಿಂದಾಗಿ ಮಾನಸಿಕ ಖಿನ್ನತೆಗೂ ಒಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಆರೋಪಿಸಿದರು.

ಆಡಳಿತ ಮಂಡಳಿ ನಿಮಿಷದ ಮಂಗಳವಾರ ಮೂಲದ ನೇಮಕ ಏಜೆನ್ಸಿ ಚಾಮರಾಜನಗರ ಒಕ್ಕೂಟದಲ್ಲಿ ನಡೆದಿರುವ ನೇಮಕ ಪ್ರಕ್ರಿಯೆ ಅಕ್ರಮವೆಂಬ ಆರೋಪದ ಹಿನ್ನೆಲೆಯಲ್ಲಿ ನೇಮಕ ಪ್ರಕರಣ ನ್ಯಾಯಾಲಯದಲ್ಲಿ ಮೇಲೇರಿದೆ. ಹೀಗಿರುವಾಗ ಅವರಿಗೆ ಮೈಮುಲ್ ಸಹ ನೇಮಕ ಪ್ರಕ್ರಿಯೆ ವಹಿಸಿದ್ದು, ಅವರಿಂದ ನ್ಯಾಯ ಸಮ್ಮತ ನೇಮಕ ಪ್ರಕ್ರಿಯೆ ನಿರೀಕ್ಷಿಸುವುದೇಗೆ? ಒಟ್ಟಾರೆ ಹೆಚ್ಚುವರಿ ನೇಮಕ ಪ್ರಕ್ರಿಯೆ ಸ್ಥಗಿತಗೊಳಿಸಿ ಸಂಪೂರ್ಣ ತನಿಖೆ ಆಗಬೇಕು. ಮುಂದಿನ ದಿನಗಳಲ್ಲಿ ಇದೇ ವಿಚಾರದಲ್ಲಿ ಯಾರು ಯಾರು ಎಷ್ಟೆಷ್ಟು ಹಣ ಪಡೆದಿದ್ದಾರೆಂಬ ಆಡಿಯೋವನ್ನು ಎರಡನೇ ಎಪಿಸೋಡ್‌ನಲ್ಲಿ ತಿಳಿಸುವುದಾಗಿ ಹೇಳಿದರು.

ಮೈಸೂರು ಡೈರಿಯಲ್ಲಿ ಆರ್ಥಿಕವಾಗಿ ಲಾಭದಲ್ಲಿ ನಡೆಯುತ್ತಿರುವುದರಿಂದಲೇ ಮೆಗಾ ಡೈರಿ ಆರಂಭವಾಗಿದೆ. ಈಗಾಗಲೇ 2 ರು. ಹಾಲಿನ ದರವನ್ನು ಇಳಿಸಿದ್ದು, 2.50 ಪೈಸೆ ಕಡಿಮೆ ಮಾಡಿ ಕರೋನಾ ಸಂಕಷ್ಟದಲ್ಲಿರುವ ರೈತರಿಗೆ ಮತ್ತಷ್ಟು ನಷ್ಟ ಮಾಡುವ ಚಿಂತನೆ ನಡೆಸಿರುವುದು ಸರಿಯಲ್ಲ. ಯಾವುದೇ ಕಾರಣಕ್ಕೂ ಬೆಲೆ ಇಳಿಕೆ ಮಾಡಿ ರೈತರ ಹಿತವನ್ನು ಮುಖ್ಯಮಂತ್ರಿಗಳು ಕಾಪಾಡಬೇಕು. ಅಕ್ರಮದಲ್ಲಿ ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿ ಯಾರೇ ನಾಯಕರಿದ್ದರೂ ತನಿಖೆ ನಡೆಸಿ ಕ್ರಮ ಕೈಗೊಳ್ಳಲಿ.
-ಸಾ.ರಾ.ಮಹೇಶ್ ಮಾಜಿ ಸಚಿವ

ಬಳ್ಳಾರಿಯ ಗಡಿಭಾಗದ ಮದ್ಯದಂಗಡಿಗಳು ಬಂದ್

ಬಳ್ಳಾರಿ: ಜಿಲ್ಲೆಯ ಗಡಿಭಾಗದ ಮದ್ಯದಂಗಡಿಗಳನ್ನು ಬಂದ್ ಮಾಡುವಂತೆ ನಾನು ಜಿಲ್ಲಾಧಿಕಾರಿಗೆ ಆದೇಶ ಕೊಟ್ಟಿದ್ದೇನೆ ಎಂದು ಸಚಿವ ಆನಂದ್ ಸಿಂಗ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿ ಸರಕಾರ ತೆಗೆದುಕೊಂಡಿರುವ ನಿರ್ಧಾರಕ್ಕೆ ನನ್ನ ವಿರೋಧ ಇಲ್ಲ. ಆದರೆ ನಮ್ಮ ಬಳ್ಳಾರಿ ಜಿಲ್ಲೆಗೆ ಆಂಧ್ರ ಪ್ರದೇಶದಿಂದ ಮದ್ಯ ಖರೀದಿಗೆ ಬರುತ್ತಿದ್ದಾರೆ. ಆಂಧ್ರ ಪ್ರದೇಶದಲ್ಲಿ ಮದ್ಯದ ಮೇಲಿನ ಅಬಕಾರಿ ಸುಂಕ ಹೆಚ್ಚಾದ ಕಾರಣ ಬಳ್ಳಾರಿ ಗಡಿ ಭಾಗಕ್ಕೆ ರಹದಾರಿ ಮೂಲಕ ಬರುತ್ತಿದ್ದಾರೆ ಎಂದರು. ಎಲ್ಲಾ ಕಡೆ ಚೆಕ್ ಪೋಸ್ಟ್‌ಗಳಿವೆ. ಆದರೂ ಅಲ್ಲಿನ ಜನರು ಇಲ್ಲಿಗೆ ಬಂದು ಮದ್ಯ ಖರೀದಿ ಮಾಡಿಕೊಂಡು ಹೋಗುತ್ತಾರೆ. ಅಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದನ್ನೇ ಒಂದು ರೀತಿ ದಂಧೆ ಮಾಡಿಕೊಂಡಿದ್ದಾರೆ. ಹೀಗಾಗಿ ನಾನು ಬಳ್ಳಾರಿ ಜಿಲ್ಲೆಯ ಗಡಿ ಭಾಗದ ಮದ್ಯದ ಅಂಗಡಿಗಳನ್ನು ಬಂದ್ ಮಾಡಲು ಡಿಸಿಗೆ ಆದೇಶ ನೀಡಿದ್ದೇನೆ ಎಂದು ಹೇಳಿದರು.

ಕೊಳವೆ ಬಾವಿಗೆ ಬಿದ್ದು ರೈತ ಸಾವು

ಬೆಳಗಾವಿ: ಕೊಳವೆ ಬಾವಿಗೆ ಬಿದ್ದು ರೈತ ಮೃತಪಟ್ಟಿರುವ ಘಟನೆ ರಾಯಬಾಗ ತಾಲೂಕಿನ ಸುಲ್ತಾನಪುರ ಗ್ರಾಮದಲ್ಲಿ ನಡೆದಿದೆ.

ಸುಲ್ತಾನಪೂರ ಗ್ರಾಮದ ಲಕ್ಕಪ್ಪ ಸಂಗಪ್ಪ ದೊಡಮನಿ (38) ಕೊಳವೆ ಬಾವಿಯಲ್ಲಿ ಸಿಲುಕಿ ಮೃತಪಟ್ಟ ರೈತ. ಕೊಳವೆ ಬಾವಿಗೆ ಸಿಲುಕಿದ್ದ ಮಾಹಿತಿ ತಿಳಿಯುತ್ತಿದ್ದಂತೆ ರಾಯಬಾಗ ತಹಸೀಲ್ದಾರ್ ಚಂದ್ರಕಾಂತ ಭಜಂತ್ರಿ, ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿದರು. ತಕ್ಷಣವೇ 2 ಜೆಸಿಬಿಗಳನ್ನು ಕರೆಯಿಸಿ ಕಾರ್ಯಾಚರಣೆ ಆರಂಭಿಸಿದರು. ಸುಮಾರು 18ರಿಂದ 20 ಅಡಿ ಆಳದಲ್ಲಿ ಸಿಲುಕಿದ್ದ ಲಕ್ಕಪ್ಪ ಅವರ ದೇಹವನ್ನ ಕ್ಯಾಮೆರಾದಿಂದ ಗಮನಿಸಿ ಜೆಸಿಬಿ ಮೂಲಕ ಮೂರು ಗಂಟೆಗಳ ಕಾರ್ಯಾಚರಣೆ ನಡೆಸಲಾಯಿತು. ಬಳಿಕ ಕೊಳವೆ ಬಾವಿಯಿಂದ ಶವವನ್ನ ಹೊರ ತೆಗೆದು ರಾಯಬಾಗ ತಾಲೂಕಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಲಾಯಿತು.

ಕಳೆದ ವಾರ ತನ್ನ ಜಮೀನಿನಲ್ಲಿ ಕೊಳವೆ ಬಾವಿ ಕೊರಿಸಿದ್ದ ಲಕ್ಕಪ್ಪ, ಕಡಿಮೆ ನೀರು ಬಂದಿದ್ದರಿಂದ ಮನನೊಂದ ಆತ್ಮಹತ್ಯೆಗೆ ಯತ್ನ ಮಾಡಿಕೊಂಡಿರಬಹುದು ಎಂಬ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ಕಾರ್ಯಾಚರಣೆಯ ಮಾಹಿತಿ ತಿಳಿದು ಬೆಳಗಾವಿ ಜಿಲ್ಲಾಧಿಕಾರಿ ಎಸ್.ಬಿ.ಬೊಮ್ಮನಹಳ್ಳಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಬೆಳಗಾವಿ ಡಿಸಿ ಬೊಮ್ಮನಹಳ್ಳಿ, ಈ ಪ್ರಕರಣದ ಸಂಪೂರ್ಣ ತನಿಖೆ ನಡೆಸಲು ಹೇಳಿದ್ದೇನೆ. ಇದು ಆತ್ಮಹತ್ಯೆ ಅಥವಾ ಕೊಲೆಯೇ ಎನ್ನುವ ತಿಳಿಯುತ್ತದೆ ಎಂದು ಹೇಳಿದರು.

ಕರೋನಾ ವಾರಿಯರ್ಸ್‌ಗೆ ಪಾದ ಪೂಜೆ

ಹಾವೇರಿ: ಕರೋನಾ ವಿರುದ್ಧ ಹೋರಾಟ ಮಾಡುತ್ತಿರುವ ವಾರಿಯರ್ಸ್ ಕಾಲು ತೊಳೆದು, ಕುಂಕುಮ ಹಚ್ಚಿ, ಪೂಜೆ ಮಾಡಿದ ಘಟನೆ ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ ಅಕ್ಕಿಆಲೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ನಾಲ್ವರು ದಾದಿಯರಿಗೆ ಗ್ರಾಮದ ವಿಶ್ವನಾಥ ಹಿರೇಮಠ ಮತ್ತು ಕೃಷ್ಣ ಈಳಿಗೇರ ಸ್ನೇಹ ಬಳಗದ ವತಿಯಿಂದ ಪಾದ ಪೂಜೆ ನೆರವೇರಿಸಲಾಗಿದೆ. ದಾದಿಯರ ಕಾರ್ಯವನ್ನು ಶ್ಲಾಘಿಸಿ ನಾಲ್ವರಿಗೂ ಸೀರೆಯನ್ನು ಉಡುಗೊರೆಯಾಗಿ ನೀಡಿ ಗೌರವ ಸಲ್ಲಿಸಿದ್ದಾರೆ. ವಾರಿಯರ್ಸ್ ಸಹ ಸ್ನೇಹ ಬಳಗದ ಸದಸ್ಯರಿಗೆ ಧನ್ಯವಾದ ತಿಳಿಸಿದ್ದಾರೆ.

ವಿ ಟಾಕೀಸ್

ಸಪ್ತ ವಸಂತ ಪೂರೈಸಿದ ರಚಿತಾ

ಗುಳಿಕೆನ್ನೆ ಬೆಡಗಿ ರಚಿತಾ ರಾಮ್ ಸಿನಿಮಾ ರಂಗದಲ್ಲಿ ಏಳು ವಸಂತಗಳನ್ನು ಪೂರೈಸಿದ್ದಾರೆ. ಸ್ಯಾಂಡಲ್‌ವುಡ್‌ನಲ್ಲಿ ಇಂದಿಗೂ ಕೂಡ ಬಹು ಬೇಡಿಕೆಯ ನಟಿಯಾಗಿಯೇ ಗುರುತಿಸಿಕೊಂಡಿದ್ದಾರೆ. ತಮ್ಮ ಸಹೋದರಿ ನಿತ್ಯಾರಾಮ್ ಜತೆ ಕಿರುತೆರೆಯಲ್ಲಿ ಬೆಂಕಿಯಲ್ಲಿ ಅರಳಿದ ಹೂವು, ಅರಸಿ ಧಾರಾವಾಹಿಗಳಲ್ಲಿ ನಟಿಸುತ್ತಿದ್ದರು. ನಟನೆಯ ಮೂಲಕವೇ ಎಲ್ಲರ ಮನಗೆದ್ದಿದ್ದರು. ಈ ವೇಳೆಯಲ್ಲಿಯೇ ತೂಗುದೀಪ್ ಪ್ರೊಡಕ್ಷನ್ಸ್‌ನಲ್ಲಿ ಬುಲ್ ಬುಲ್ ಚಿತ್ರ ಸೆಟ್ಟೇರಲು ರೆಡಿಯಾಗುತ್ತಿತ್ತು. ಹೊಸಚಿತ್ರಕ್ಕಾಗಿ ನಾಯಕಿಯ ಹುಡುಕಾಟಕ್ಕಾಗಿ ಆಡಿಷನ್ ನಡೆದಿತ್ತು. ಆಡಿಷನ್‌ಗೆ ತೆರಳಿದ್ದ ಮುದ್ದು ಮುಖದ ರಚ್ಚು, ದಚ್ಚು ಜತೆ ಡ್ಯುಯೆಟ್ ಹಾಡಲು ಆಯ್ಕೆಯಾದರು. ಅಲ್ಲಿಂದ ರಚಿತಾ ಸಿನಿಮಾ ಜರ್ನಿ ಆರಂಭವಾಯಿತು.

ಮೊದಲ ಚಿತ್ರವೇ ದೊಡ್ಡ ಮಟ್ಟದಲ್ಲಿ ಹಿಟ್ ಆಯಿತು. ಡಿಂಪಲ್ ಬೆಡಗಿ ಮೆಚ್ಚಿನ ನಾಯಕಿಯಾಗಿ ಗುರುತಿಸಿಕೊಂಡರು. ಅಲ್ಲಿಂದ ರಚಿತಾಗೆ ಸಾಲು ಸಾಲು ಚಿತ್ರಗಳಲ್ಲಿ ನಟಿಸುವ ಅವಕಾಶಗಳು ಅರಸಿ ಬಂದವು. ಸ್ಟಾರ್ ನಟರ ಜತೆಯೇ ಸ್ಕ್ರೀನ್ ಶೇರ್ ಮಾಡುವ ಮಹಾದವಕಾಶ ಒಲಿದು ಬಂತು. ಅಂಬರೀಶ, ರನ್ನ , ರಥಾವರ, ಭರ್ಜರಿ, ಅಯೋಗ್ಯ, ನಟಸಾರ್ವಭೌವ, ಐ ಲವ್ ಯು, ಹೀಗೆ ಹಲವು ಚಿತ್ರಗಳಲ್ಲಿ ನಟಿಸಿದರು. ಎರಡು ಬಾರಿ ಸೈಮಾ ಅವಾರ್ಡ್ ಹಾಗೂ ಒಂದು ಬಾರಿ ಫಿಲ್ಮ್ ಫೇರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ರಚ್ಚು ಅಭಿನಯದ 100, ಏಕ್ ಲವ್ ಆಲಿಯಾ, ವೀರಂ, ಸೀರೆ, ಏಪ್ರಿಲ್ ಮತ್ತಿತರ ಚಿತ್ರಗಳು ತೆರೆಗೆ ಬರಲು ರೆಡಿಯಾಗಿವೆ. ತೆಲುಗು ಚಿತ್ರದಲ್ಲೂ ರಚಿತಾ ಬ್ಯುಸಿಯಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಏಳು ವರ್ಷ ಪೂರೈಸಿರುವ ರಚಿತಾ ರಾಮ್ ಬಾವುಕ ಟ್ವೀಟ್ ಮೂಲಕ ತಮ್ಮ ಸಿನಿ ಜರ್ನಿಯನ್ನು ಮೆಲುಕು ಹಾಕಿದ್ದಾರೆ.

'ಬುಲ್ ಬುಲ್ ನಿಂದ ಬೆಳ್ಳಿತೆರೆಗೆ ಇಟ್ಟ ಹೆಜ್ಜೆ ಇಂದಿಗೂ ಮಾಸಿಲ್ಲ. ಇದಕ್ಕೆ ಕಾರಣ ನನ್ನ ತಂದೆ ತಾಯಿಯ ನಂಬಿಕೆ, ದೇವರ ಅನುಗ್ರಹ ಹಾಗೂ ನನ್ನ ಪ್ರೀತಿಯ ಅಭಿಮಾನಿಗಳ ಹಾರೈಕೆ. ಈ ಪಯಣದಲ್ಲಿ ಕಲಿತ ಪಾಠಗಳು ಅರಿತ ಮನಸುಗಳು, ಪ್ರತಿಯೊಂದು ಸಿನಿಮಾದ ನೆನಪುಗಳು ನೆನೆಸಿಕೊಂಡ್ರೆ, ಕಣ್ತುಂಬಿ ಬರುತ್ತದೆ' ಎಂದಿದ್ದಾರೆ.

ಕೊಪ್ಪಳದಿಂದ ಹುಬ್ಬಳ್ಳಿಗೆ ರಾತ್ರೋರಾತ್ರಿ ಸಾಗಾಟ | ಗದಗ ನಗರದಲ್ಲಿ ಕಳ್ಳ ಸಾಗಾಟ ಬಯಲು

ಬಡವರ ಅಕ್ಕಿಗೆ ಖದೀಮರ ಕನ್ನ

ಕೊಪ್ಪಳ: ರಾಜ್ಯದ ಯಾವೊಬ್ಬ ಬಡವ ಹಸಿವಿನಿಂದ ಬಳಲಬಾರದು ಎಂದು ರಾಜ್ಯ ಸರಕಾರ ಬಡತನ ರೇಖೆಗಿಂತ ಕೆಳಗಿರುವ ಜನತೆಗೆ ಉಚಿತ ಅಕ್ಕಿ ನೀಡುತ್ತಿದೆ. ಲಾಕ್‌ಡೌನ್ ಪರಿಹಾರವಾಗಿ ಈಚೆಗೆ ಕೇಂದ್ರ ಸರಕಾರವೂ ಸಹ ಗರೀಬ್ ಕಲ್ಯಾಣ ಯೋಜನೆಯಡಿ ಉಚಿತ ಅಕ್ಕಿ ನೀಡುತ್ತಿದೆ. ಆದರೆ ಈ ಅಕ್ಕಿಯನ್ನು ಅಧಿಕಾರಿಗಳು ಸೇರಿಕೊಂಡು ಕಾಳಸಂತೆಯಲ್ಲಿ ಮಾರಿಕೊಳ್ಳುತ್ತಿರುವ ಪ್ರಕರಣ ಬೆಳಕಿಗೆ ಬಂದಿದೆ.

ಏನಿದು ಪ್ರಕರಣ?: ಮೇ 6ರ ಬೆಳಗಿನ ಜಾವ 5 ಗಂಟೆ ಸುಮಾರಿಗೆ ಗದಗ ನಗರ ಠಾಣೆ ಪೊಲೀಸರು ಹುಬ್ಬಳ್ಳಿ ಕಡೆಗೆ ಹೊರಟಿದ್ದ ಲಾರಿಯೊಂದನ್ನು ಕಳಸಾಪುರ ರಿಂಗ್ ರಸ್ತೆಯಲ್ಲಿ ತಡೆಯುತ್ತಾರೆ. ಲಾರಿ ಚಾಲಕ ಸೋಮಲಿಂಗಪ್ಪ ಶಿರೂರನ್ನು ವಿಚಾರಿಸಿದಾಗ ಕೊಪ್ಪಳದ ಜವಾಹರ ರಸ್ತೆಯಲ್ಲಿರುವ ಕಿರಣ್ ಟ್ರೇಡರ್ಸ್‌ನಿಂದ ಹುಬ್ಬಳ್ಳಿಯ ಬಾಲಾಜಿ ಟ್ರೇಡರ್ಸ್‌ಗೆ ಸುಮಾರು 600 ಚೀಲ (ಚೀಲವೊಂದರಲ್ಲಿ 50 ಕೆಜಿ ಅಕ್ಕಿ) ಅಂದರೆ 7.35 ಲಕ್ಷ ರು. ಮೌಲ್ಯದ 300 ಕ್ವಿಂಟಾಲ್ ಅಕ್ಕಿಯನ್ನು ಸಾಗಿಸುತ್ತಿರುವುದು ಬಯಲಿಗೆ ಬಂದಿದೆ. ಈ ಕುರಿತು ವಿಚಾರಣೆ ನೆಪದಲ್ಲಿ ಪ್ರಕರಣ ದಾಖಲಿಸಲು ವಿಳಂಬ ಮಾಡಿರುವ ಪೊಲೀಸ್ ಅಧಿಕಾರಿಗಳು ಸಂಜೆ ಹೊತ್ತಿಗೆ ಲಾರಿ ಚಾಲಕ ಸೋಮಲಿಂಗಪ್ಪ ಶಿರೂರು ಹಾಗೂ ಕೊಪ್ಪಳದ ಕಿರಣ್ ಟ್ರೇಡರ್ಸ್ ಅಬ್ದುಲ್ ರೆಹಮಾನ್ ಮುನ್ನಿಯನ್ನು ನ್ಯಾಯಾಂಗದ ವಶಕ್ಕೆ ನೀಡಿ ಎಫ್‌ಐಆರ್ ದಾಖಲಿಸಿದ್ದಾರೆ.

ಪೊಲೀಸರು ಶಾಮೀಲು!: ಈ ಪ್ರಕರಣದಲ್ಲಿ ಪೊಲೀಸರ ಮೇಲೂ ಗುಮಾನಿ ಶುರುವಾಗಿದೆ. ಕಾರಣ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಕೊಪ್ಪಳದ ಕಿರಣ್ ಟ್ರೇಡರ್ಸ್ ಹೆಸರಿದೆ. ಆದರೆ ಎಲ್ಲೂ ಸಹ ಹುಬ್ಬಳ್ಳಿಯ ಬಾಲಾಜಿ ಟ್ರೇಡರ್ಸ್ ಹೆಸರಿಲ್ಲ. ಬಡವರ ಅನ್ನಭಾಗ್ಯವನ್ನ ಕಸಿದುಕೊಂಡದ್ದು ಎಷ್ಟು ಅಪರಾಧವೋ ಅದನ್ನ ಖರೀದಿಸುವುದು ಸಹ ಅಷ್ಟೇ ಅಪರಾಧ ಎನ್ನುವ ಅಂಶವನ್ನು ಪೊಲೀಸರು ಮರೆತಂತಿದೆ. ಅಥವಾ ಉದ್ದೇಶಪೂರ್ವಕವಾಗಿ ಹುಬ್ಬಳ್ಳಿಯ ಬಾಲಾಜಿ ಟ್ರೇಡರ್ಸ್ ಹೆಸರನ್ನು ಮರೆ ಮಾಚಿರುವ ಸಾಧ್ಯತೆಯೂ ಇದೆ. ಈ ಬಗ್ಗೆ ಪ್ರಶ್ನಿಸಿದರೆ ಎಲ್ಲವನ್ನೂ ಎಫ್‌ಐಆರ್‌ನಲ್ಲೇ ದಾಖಲಿಸಬೇಕು ಅಂತೇನಿಲ್ಲ, ಎಫ್‌ಐಆರ್ ದಾಖಲಾದ 90 ದಿನಗಳೊಳಗೆ ಚಾರ್ಜ್ ಶೀಟನ್ನು ಕೋರ್ಟ್‌ಗೆ ಸಲ್ಲಿಸಬೇಕು. ಆ ದೋಷಾರೋಪಣೆ ಪಟ್ಟಿಯಲ್ಲಿ ಎಲ್ಲ ಅಂಶಗಳನ್ನು ದಾಖಲಿಸುತ್ತೇವೆ ಎನ್ನುವ ಜಾಣ್ಮೆ ಉತ್ತರ ಪೊಲೀಸ್ ಇಲಾಖೆಯದ್ದು.

ಅಧಿಕಾರಿಗಳ ಮೇಲೆ ಅನುಮಾನ

ಇಷ್ಟು ದೊಡ್ಡ ಮೊತ್ತದ ಅಕ್ಕಿಯನ್ನು ಅಧಿಕಾರಿಗಳ ಸಹಕಾರವಿಲ್ಲದೇ ಪಡಿತರ ಕೇಂದ್ರದಿಂದಾಗಲೀ ಅಥವಾ ಭಾರತೀಯ ಆಹಾರ ನಿಗಮದ ಗೋಡೌನ್‌ನಿಂದ ಖಾಸಗಿ ವ್ಯಕ್ತಿಗಳ ಗೋಡೌನ್‌ಗೆ ಸಾಗಿಸಲು ಸಾಧ್ಯವೇ? ಎನ್ನುವ ಪ್ರಶ್ನೆ ಉದ್ಭವವಾಗಿದ್ದು, ನಿಷ್ಪಕ್ಷಪಾತ ತನಿಖೆಯಿಂದ ಮಾತ್ರ ಸತ್ಯ ಹೊರ ಬರಲು ಸಾಧ್ಯ. ಇದರಲ್ಲಿ ಪೊಲೀಸರು ಶಾಮೀಲಾದರೆ ಕಾಟಾಚಾರದ ತನಿಖೆ ನಡೆಸಿ ಚಾರ್ಜ್ ಶೀಟ್‌ನಲ್ಲಿ ಖಿಲಾಸೆಯಾಗಲು ಸಹಕಾರಿ ಯಾಗುವ ಅಂಶಗಳನ್ನು ಸೇರಿಸಿ ಬಡವರ ಅನ್ನ ಕಸಿದು ಮಾರಾಟ ಮಾಡುವವರನ್ನು ರಾಜಾ ರೋಷವಾಗಿ ನಿರ್ದೋಷಿ ಪಟ್ಟ ಕಟ್ಟಬಹುದು.

ಕ್ವಾರಂಟೈನ್‌ಗೆ ತೀವ್ರ ವಿರೋಧ

ಶಿವಮೊಗ್ಗ: ಕರೋನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಹೊರ ರಾಜ್ಯ, ಹೊರ ಜಿಲ್ಲೆಗಳಲ್ಲಿಯೇ ಲಾಕ್ ಆಗಿದ್ದ ಕಾರ್ಮಿಕರು, ಜನರು ಇದೀಗ ತಮ್ಮ ತಮ್ಮ ಊರುಗಳತ್ತ ಬರುತ್ತಿದ್ದಾರೆ. ಇದೀಗ ಹೊರ ರಾಜ್ಯಗಳಿಂದ ಬರುತ್ತಿರುವ ಕಾರ್ಮಿಕರಿಗೆ ತಮ್ಮ ಗ್ರಾಮಗಳಲ್ಲಿ ಕ್ವಾರಂಟೈನ್ ಮಾಡಬೇಡಿ ಎಂದು ಗ್ರಾಮಸ್ಥರು ಪ್ರತಿಭಟನೆ ಮಾಡುತ್ತಿದ್ದಾರೆ. ಜಿಲ್ಲೆಗೆ ಬೇರೆ ಬೇರೆ ರಾಜ್ಯಗಳಿಂದ ಕಾರ್ಮಿಕರು ಬರುತ್ತಿದ್ದಾರೆ. ಹೊರ ರಾಜ್ಯಗಳಿಂದ ಬರುತ್ತಿರುವ ಕಾರ್ಮಿಕರಿಗೆ ಜಿಲ್ಲಾಡಳಿತ ಸರಕಾರಿ ವಸತಿ ನಿಲಯ ಹಾಗೂ ವಸತಿ ಶಾಲೆಗಳಲ್ಲಿ ಕ್ವಾರಂಟೈನ್ ಮಾಡಲು ಸಿದ್ಧತೆ ಕೈಗೊಂಡಿದೆ. ಆದರೆ ಕೆಲವೆಡೆ ಕ್ವಾರಂಟೈನ್ ಮಾಡಲು ಸ್ಥಳೀಯರಿಂದ ವಿರೋಧ ಸಹ ವ್ಯಕ್ತವಾಗುತ್ತಿದೆ. ಶಿವಮೊಗ್ಗ ಸಮೀಪದ ಗೊಂದಿ ಚಟ್ನಹಳ್ಳಿ ಬಳಿಯ ಅಲ್ಪ ಸಂಖ್ಯಾತರ ವಸತಿ ಶಾಲೆಯಲ್ಲಿ ಹೊರ ರಾಜ್ಯದಿಂದ ಬಂದಿದ್ದ 15 ಮಂದಿಯನ್ನು ಕ್ವಾರಂಟೈನ್ ಮಾಡಲು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಅಧಿಕಾರಿಗಳು ಕರೆದುಕೊಂಡು ಹೋಗಿದ್ದರು. ಆದರೆ ಈ ವೇಳೆ ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಕ್ವಾರಂಟೈನ್ ಮಾಡೋದು ಬೇಡ, ನಾವು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದರು.